ಆ) ಬಂದಿದೆ

ಇ) ನಮೂನೆ-50 ರಲ್ಲಿ ಸುಮಾರು 50,000 ಪ್ರಕರಣಗಳಲ್ಲಿ ಸಾಗುವಳಿ ಚೀಟಿ ನೀಡಲು ಬಾಕಿ ಇದೆ. ಫಲಾನುಭವಿಗಳಿಂದ ಜಮೀನಿನ ಕಿಮ್ಮತ್ತನ್ನು ಪಾವತಿಸಿಕೊಂಡು ಸಾಗುವಳಿ ಚೀಟಿಗಳನ್ನು ನೀಡಲು ಸೂಚನೆಗಳನ್ನು ನೀಡಲಾಗಿದೆ.

ನಮೂನೆ-53ರಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳ ವಿಲೇವಾರಿಯು ಹೊಸದಾಗಿ ರಚಿಸಲಾಗಿರುವ ಸಮಿತಿಗಳ ಮುಂದೆ ಪ್ರಗತಿಯಲ್ಲಿದ್ದು ಮಂಜೂರಾದ ಪ್ರಕರಣಗಳಲ್ಲಿ ಫಲಾನುಭವಿಗಳಿಂದ ಜಮೀನಿನ ಕಿಮ್ಮತ್ತನ್ನು ಪಾವತಿಸಿಕೊಂಡು ಸಾಗುವಳಿ ಚೀಟಿಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.

ಅಂಗನವಾಡಿ ಕಾರ್ಯಕರ್ತೆಯರ ಗೈರು ಹಾಜರಿ

885 (1003) ಶ್ರೀ ಜೆ.ಸಿ. ರೆಡ್ಡಿ (ಚಿಂತಾಮಣಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ 6 ತಿಂಗಳು ಮತ್ತು 1 ವರ್ಷದಿಂದ ಅನಧಿಕೃತವಾಗಿ ಗೈರು ಹಾಜರಾಗಿರುವ ಅಂಗನವಾಡಿ ಕಾರ್ಯಕರ್ತೆಯರು ಎಷ್ಟು; ಅವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಚಿಂತಾಮಣಿ ಕ್ಷೇತ್ರದ ಅಂಗನವಾಡಿಗಳಲ್ಲಿ ಆರು ತಿಂಗಳಿಂದ ಶಿಕ್ಷಕರು ಇಲ್ಲದೆ ಇರುವ ಕೇಂದ್ರಗಳು ಎಷ್ಟು; ಶಿಕ್ಷಕರು ಇಲ್ಲದೆ ಅಂಗನವಾಡಿ ಶಾಲೆಗಳು ಮುಚ್ಚಿರುವುದು ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಾದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ತೀರ್ಮಾನವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 6 ತಿಂಗಳಿಂದ 1 ವರ್ಷ - 2

1 ವರ್ಷ - 1

ಗೈರು ಹಾಜರಿ ಅವಧಿಯಲ್ಲಿ ಗೌರವಧನವನ್ನು ತಡೆ ಹಿಡಿಯಲಾಗಿದೆ.

ಆ) 1 ಅಂಗನವಾಡಿ ಕೇಂದ್ರ ಪ್ರಭಾರೆ ವ್ಯವಸ್ಥೆ ಮಾಡಿ ಅಂಗನವಾಡಿ ಕೇಂದ್ರದ ಕಾರ್ಯಚಟುವಟಿಕೆಗಳು ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳಲಾಗಿದೆ.

ಇ) ಅನ್ವಯಿಸುವುದಿಲ್ಲ.

ಆಶ್ರಯ ಯೋಜನೆ ಮನೆಗಳ ಮಂಜೂರಾತಿ

886 (998) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯತ ಮನೆ ನಿರ್ಮಾಣದಲ್ಲಿ ಬಡವರಿಗೆ ನೀಡುವ ಸರ್ಕಾರದ ಹಣ ಕಡಿಮೆಯಾಗಿದ್ದು ಹೆಚ್ಚು ಮಾಡಲು ಅವಕಾಶವಿದೆಯೇ;

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಅಂಬೇಡ್ಕರ್ ಮೆನಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಖಮರಲ್ ಇಸ್ಲಾಂ (ವಸತಿ ಸಚಿವರು) :

ಅ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಆ) ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶಿವಮೊಗ್ಗ ಕೃಷಿ ಮಾರುಕಟ್ಟೆಗೆ ಹಣ ಬಿಡುಗಡೆ

887 (999) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಪ್ರಸಕ್ತ ಸಾಲಿನಲ್ಲಿ ವಸೂಲಾದ ಹಣವೆಷ್ಟು; ರೈತರ ಅಭಿವೃದ್ಧಿಗೆ ಎಷ್ಟು ಹಣ ವಿನಿಯೋಗ ಮಾಡಲಾಗಿದೆ?

ಶ್ರೀ ಆರ್. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2000-01ನೇ ಪ್ರಸಕ್ತ ಸಾಲಿನಲ್ಲಿ ಜನವರಿ-2001 ರ ಅಂತ್ಯಕ್ಕೆ ಈ ಕೆಳಕಂಡಂತೆ ಆದಾಯ ವಸೂಲಾಗಿರುತ್ತದೆ.

1.	ಮಾ.ಶು.	ರೂ. 4, 23,02.410
2.	ಲೈ.ಶು.	ರೂ. 52,025
3.	ಇತರೆ ಆದಾಯ ರೂ	1,01,85,251
	ಒಟ್ಟು	ರೂ. 5, 25, 39, 686

ರೈತರ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಸಮಿತಿ ನಿಧಿಯಿಂದ ವೆಚ್ಚ ಮಾಡಲಾಗಿದೆ.

1.	ಅಭಿವೃದ್ಧಿ ಕಾಮಗಾರಿಗಳಿಗೆ	ರೂ. 1, 84, 76, 301
2.	ತೂಕದ ಯಂತ್ರ	ರೂ. 10, 85818
	ಒಟ್ಟು	ರೂ, 1, 95ಶಿ, 119